ಬೆಂಗಳೂರಂ ಅಭಿವೃದ್ಧಿ ಪ್ರಾಧಿಕಾರದವರು ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕ ಸೌಲಭ್ಯದ ನಿವೇಶನಗಳ ಸಂಖ್ಯೆ

೧೨೮೨. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕ ಸೌಲಭ್ಯ ನಿವೇಶಗಳನ್ನು ಗುರುತಿಸಿರುವ ಸಂಖ್ಯೆ, (ಪ್ರಾಧಿಕಾರದ ಪ್ರತಿಯೊಂದು ಬಡಾವಣೆಗಳ ವಿವರಗಳನ್ನು ನಮೂದಿಸುವುದು).

ಆ) ಅವುಗಳಲ್ಲಿ ಪಾಠಶಾಲೆಗೆ, ಮಾರುಕಟ್ಟೆಗೆ ಮತ್ತು ವಿವಿಧ ಸಂಘಗಳಿಗೆ ಹಂಚಿರುವ ಸಾರ್ವಜನಿಕ ಸೌಲಭ್ಯ ನಿವೇಶನಗಳ ಸಂಖ್ಯೆ.

ಇ) ಸಾರ್ವಜನಿಕ ಸೌಲಭ್ಯ ನಿವೇಶನಗಳ ಹಂಚಿಕೆಗಾಗಿ ಪಾಠಶಾಲೆ ಮತ್ತು ಇನ್ನಿತರ ಸಂಘ ಸಂಸ್ಥೆಗಳಿಂದ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ?

ಈ) ಸರ್ಕಾರವು ಸಾರ್ವಜನಿಕ ಸೌಲಭ್ಯಗಳ ನಿವೇಶನಗಳನ್ನು ಪಾಠಶಾಲೆಗಳಿಗೆ ಹಾಗೂ ಇನ್ನಿತರ ಸಂಘ ಸಂಸ್ಥೆಗಳಿಗೆ ಹಂಚುವ ಉದ್ದೇಶವಿದೆಯೇ ಅಥವಾ ಉದ್ಯಾನವನಗಳನ್ನಾಗಿಯೇ ಕಾಪಾಡಂವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೧೫–೩–೧೯೮೪ ರಿಂದ ಸಾರ್ವಜನಿಕ ಸೌಲಭ್ಯ ನಿವೇಶನಗಳ ಹಂಚಿಕೆ ನಿಯಮಗಳು ಜಾರಿಗೆ ಬಂದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಬಡಾವಣೆಗಳಲ್ಲಿ ೨೨೭ ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ಗುರುತಿಸಿದೆ. (ವಿವರಗಳನ್ನು ಅನುಬಂಧ–೧ರಲ್ಲಿ ನೀಡಲಾಗಿದೆ).

ಆ) ಸದರಿ ನಿಯಮವು ಜಾರಿಗೆ ಬಂದನಂತರ ಮೇ ೧೯೯೦ ರಲ್ಲಿ ೧೧ ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ಪಾಠಶಾಲೆಗಳಿಗೆ ಹಾಗೂ ೧೬ ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ಇತರ ಸಂಘ ಸಂಸ್ಥೆಗಳಿಗೆ ಹಂಚಲಾಗಿದೆ.

ಇ) ಪ್ರಾಧಿಕಾರವು ಪ್ರಕಟಿಸಿದ ೩ ಪ್ರಕಟಣೆಯ ಮೇರೆಗೆ ಪಾಠಶಾಲೆಗಳಿಂದ ೭೬, ಸಂಸ್ಥೆಗಳಿಂದ ಹಾಗೂ ಇನ್ನಿತರ ಉದ್ದೇಶಗಳಿಗಾಗಿ ೮೧ ವಿವಿಧ ಸಂಸ್ಥೆಗಳಿಂದ ಸಾರ್ವಜನಿಕ ಸೌಲಭ್ಯ ನಿವೇಶನ ಕೋರಿ ಅರ್ಜಿಗಳನ್ನು ಏಪ್ರಿಲ್ ೧೯೯೦ ರಂದು ಸ್ವೀಕರಿಸಲಾಗಿದೆ.

ಈ) ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ವಿವಿಧ ಉದ್ದೇಶಗಳಿಗಾಗಿ ಅಂದರೆ ಪಾಠಶಾಲೆ ಮತ್ತು ಉದ್ಯಾನವನಗಳು ಮತ್ತು ಇನ್ನಿತರ ಉದ್ದೇಶಕ್ಕಾಗಿ ಕಾದಿರಿಸಲಾಗುತ್ತದೆ. ಉದ್ಯಾನವನಗಳಿಗಾಗಿ ಕಾದಿರಿಸಲಾಗಿರುವ ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ಉದ್ಯಾನವನಗಳಿಗಾಗಿಯೇ ಉಪಯೋಗಿಸಲಾಗುವುದು.

"ANNEXURE—I"

LIST OF C. A. SITES IDENTIEIED BY THE AUTHORITY

Sl. No.	Division	No. of C. A. Sites Identified	Total
	SOUTH DIVISION		
1	Banashnkari Layout ...	36	
2.	Kumaraswamy Layout ...	01	
3	Sarakki Layout ...	18	
4	B.T.M. Layout ...	18	
	...	— ...	73
	NORTH DIVISION		
5	Rajamahal Vilas Layout ...	08	
6	Matadahalli Layout ...	01	
7	Hennur–Bellary Road Layout ...	06	
8	Hennur–Banaswadi Layout ...	12	
9	Old Madras Road–Banaswadi layout ...	05	
10	R. T. Nagar Layout ...	03	
	...	— ...	35
	WEST DIVISION		
11	Nagarabhavi Layout ...	09	
12	Industrial Workers Layout, J. B. Kaval ...	09	
13	Kengeri Satellite Town Layout ...	21	
14	West of Chord Road Layout ...	04	
15	Further Extension of Mahalakshmi Layout ...	02	
16	Industrial Town, WCR Layout ...	08	
17	R.P.C. Layout ...	07	
18	Chandra Layout ...	02	
19	M.R.C.R. Layout ...	07	
2)	Hosahalli Layout ...	07 ...	76
	EAST DIVISION		
21	HAL II & IIIrd Stage ...	14	
22	Domlur IInd Stage ...	03	
23	Koramangala Layout ...	26 ...	43
		Grand Total	227